5.	ಕೇಂದ್ರ ಪುರಸ್ಕೃತ ಹಣ್ಣು ಮತ್ತು ತರಕಾರಿ ಕಿರುಚೀಲಗಳ ವಿತರಣೆ.	ರೂ.150--0ಹೆಲೆಯ ತರಕಾರಿ ಬೀಜ, ಸಲಕರಣೆ ಔಷಧಿಯನ್ನು ಉಚಿತವಾಗಿ ಹಂಚಲಾಗುತ್ತದೆ.	ಬೆಳಗಾವಿ ತಾಲ್ಲೂಕು.
6.	ಆಲೂಗೆಡ್ಡೆ ನಿಜ ಬೀಜ ಯೋಜನೆ ಕಾರ್ಯಕ್ರಮ	ರೈತರ ಜಮೀನಿನಲ್ಲಿ ಪ್ರಾತ್ಯಕ್ಷತೆಗಳನ್ನು ಏರ್ಪಡಿಸುವುದು ಮತ್ತು ಇನ್‌ಪುಂಟ್ ಸವಲತ್ತುಗಳನ್ನು ಒದಗಿಸುವುದು.	ಬೆಳಗಾವಿ ಮತ್ತು ಬೈಲಹೊಂಗಲ.
7.	ಪ್ರಾದೇಶಿಕ ಪುಷ್ಪಾಭಿವೃದ್ಧಿ ಯೋಜನೆ ಕೇಂದ್ರಗಳು.	ರೈತರ ತೋಟದಲ್ಲಿ ಪ್ರಾತ್ಯಕ್ಷತೆಯನ್ನು ಏರ್ಪಡಿಸಿ ಇನ್ಪುಟ್ ಸವಲತ್ತುಗಳನ್ನು ಒದಗಿಸುವುದು.	ಉತ್ಪಾದನೆ ಇಡಕಲ್ (ಹುಕ್ಕೇರಿ ತಾ) ಎಲ್ಲಾ ೧೦ ತಾಲ್ಲೂಕುಗಳಲ್ಲಿ ಪ್ರಾತ್ಯಕ್ಷತೆಗಳು.
8.	ತರಬೇತಿ ಮತ್ತು ವಿಸ್ತರಣೆ	ವಿಚಾರಗೋಷ್ಠಿ, ಪ್ರದರ್ಶನ ಮತ್ತು ಕ್ಷೇತ್ರೋತ್ಸವಗಳನ್ನು ಏರ್ಪಡಿಸುವುದು.	ಬೆಳಗಾವಿ ಮತ್ತು ಗೋಕಾಕ್ ತಾಲ್ಲೂಕು.
9.	ಪ್ರಾದೇಶಿಕ ತರಕಾರಿ ಬೀಜೋತ್ಪಾದನೆ ಕೇಂದ್ರ.	ತೋಟಗಾರಿಕೆ ಕ್ಷೇತ್ರಗಳಲ್ಲಿ ಮೂಲ ಬೀಜ, ದೃಢೀಕೃತ ಬೀಜ ಉತ್ಪಾದಿಸಿ ರೈತರಿಗೆ ವಿಸ್ತರಿಸುವುದು.	ಹಿಡಕಲ್ (ಹುಕ್ಕೇರಿ ತಾ)
10.	ಕೇಂದ್ರ ಪುರಸ್ಕೃತ ಗೋಡಂಬಿ ಯೋಜನೆ.	ಗೋಡಂಬಿ ಫೆಸಲಿಗೆ ತಗಲುವ ಕೀಟಗಳನ್ನು ತಡೆಗಟ್ಟಲು ಸಸ್ಯ ಸಂರಕ್ಷಣೆ ಕೀಟನಾಶಕ ಔಷಧಿಗಳನ್ನು ವಿತರಿಸುವುದು.	ಬೆಳಗಾಂ, ಖಾನಾಪುರ ಹುಕ್ಕೇರಿ ಮತ್ತು ಬೈಲಹೊಂಗಲ.
11	ಉತ್ಕೃಷ್ಟ ಗುಣಮಟ್ಟದ ಉತ್ಪಾದನೆ ಗಿಡಗಳ ಉತ್ಪಾದನೆ ಮತ್ತು ವಿತರಣೆ.	ಉತ್ತಮ ಗುಣಮಟ್ಟದ ಗಿಡಗಳನ್ನು ಉತ್ಪಾದಿಸಿ ರೈತರಿಗೆ ವಿತರಣೆ ಮಾಡುವುದು.	ಉತ್ಪಾದನೆ ಹಿಡಕಲ್ (ಹುಕ್ಕೇರಿ ತಾ) ಗೋಕಾಕ್, ಸವದತ್ತಿ, ಖಾನಾಪುರ ಮತ್ತು ಎಲ್ಲಾ ತಾಲ್ಲೂಕುಗಳಲ್ಲಿ ವಿವರಿಸಲಾಗುವುದು.

ಮಲ್ಲೇಶ್ವರಂ ಸಹಕಾರ ಬ್ಯಾಂಕಿನಲ್ಲಿ ಕಳೆದ 3 ವರ್ಷಗಳಿಂದ ವಿತರಣೆ ಮಾಡಿರುವ ಸಾಲ.

117 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ನಗರದಲ್ಲಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕಿನವರು ಕಳೆದ 3 ವರ್ಷಗಳಿಂದ 50 ಸಾವಿರ ರೂ.ಗಳಿಗೆ ಮೇಲ್ಪಟ್ಟಂತೆ ಎಷ್ಟು ಗರಿಷ್ಟ ಮೊತ್ತದ ಸಾಲವನ್ನು ಕೊಟ್ಟಿದ್ದಾರೆ (ವಾಹನ ಸಾಲ, ಮನೆ ಕಟ್ಟುವ ಸಾಲ, ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸುವ ಸಲುವಾಗಿ ತೆಗೆದುಕೊಂಡಿರುವ ಸಾಲಗಳ ಪೂರ್ಣ ವಿವರ ನೀಡುವುದು.

ಅ) ಈ ಸಾಲವನ್ನು ಪಡೆದಿರುವ ಫಲಾನುಭವಿಗಳ ಹೆಸರು ವಿಳಾಸವನ್ನು ಒದಗಿಸುವುದು ?

ಇ) ಈ ಪೈಕಿ ಎಷ್ಟು ಜನರು ಕಳೆದ ಮೂರು ವರ್ಷಗಳಿಂದ ಸಾಲದ ಮರು ಪಾವತಿಯನ್ನು ಸಮಯಕ್ಕೆ ಸರಿಯಾಗಿ ಮಾಡಿಕೊಂಡು ಬರುತ್ತಿದ್ದಾರೆ.

ಈ) ಕಳೆದ ಮೂರು ವರ್ಷದ ಅವಧಿಯಲ್ಲಿ ಎಷ್ಟು ಜನರಿಗೆ ಅವರು ತೆಗೆದುಕೊಂಡಿರುವ ಸಾಲವನ್ನು ಮನ್ನಾ ಮಾಡಲಾಗಿದೆ. ಇಲ್ಲವೆ ಬಡ್ಡಿ ರಿಯಾಯಿತಿ ನೀಡಲಾಗಿದೆಯೇ ? (ಹೆಸರು ವಿವರ ಹಾಗೂ ಮೊತ್ತವನ್ನು ನೀಡುವುದು.)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಈ ಬ್ಯಾಂಕು ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡಂತೆ ರೂ. 50,000 ಕ್ಕೂ ಮೇಲ್ಪಟ್ಟು ಸಾಲವನ್ನು ವಿತರಿಸಿರುತ್ತೆ.

(ರೂ.ಲಕ್ಷಗಳಲ್ಲಿ)

ವರ್ಷ	ವಾಹನ ಸಾಲ		ವಿತರಿಸಲಾದ ಸಾಲ ಮನೆಕಟ್ಟಲು ಸಾಲ		ಸಣ್ಣ ಸಾಲ	ಕೈಗಾರಿಕೆ	ಒಟ್ಟು	
	ಸಂ.	ಮೊತ್ತ	ಸಂ.	ಮೊತ್ತ	ಸಂ.	ಮೊತ್ತ	ಸಂ.	ಮೊತ್ತ
1991-92	2	2.02	26	20.43	2	1.80	30	24.25
1992-93	-	-	30	23.55	-	-	30	23.55
1993-94	3	4.22	21	17.17	-	-	24	21.39
(ದಿನಾಂಕ : 01-04-1993 ರಿಂದ 31-12-1993ರವರೆಗೆ)								
ಒಟ್ಟು	5	6.24	77	61.15	2	1.80	84	69.19

ಆ) ಬ್ಯಾಂಕು ಮತ್ತು ಸದಸ್ಯರ ವ್ಯವಹಾರವು ವ್ಯಕ್ತಿಗತ ಮತ್ತು ಗುಪ್ತವಾಗಿರಬೇಕಾಗಿದ್ದು, ವೈಯಕ್ತಿಕ ಮಾಹಿತಿ ನೀಡುವುದು ಸಮಂಜಸವಾಗದು.

ಇ) 56 ಸಾಲಗಾರರು ತಮ್ಮ ಸಾಲದ ಕಂತುಗಳನ್ನು ಸರಿಯಾದ ಸಮಯಕ್ಕೆ ಪಾವತಿಸುತ್ತಿದ್ದಾರೆ.

ಕಳೆದ ಮೂರು ವರ್ಷಗಳಲ್ಲಿ ಬ್ಯಾಂಕ್ ಯಾವುದೇ ರೀತಿಯ ಅಸಲಾಗಲೀ ಅಥವಾ ಬಡ್ಡಿಯಾಗಲೀ ಮನ್ನಾ ಮಾಡಿರುವುದಿಲ್ಲ, ಹಾಗೂ ಯಾವುದೇ ರಿಯಾಯತಿ ನೀಡಿರುವುದಿಲ್ಲ.

ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಬೆಳವಡಿ ಗ್ರಾಮದಲ್ಲಿ ಸಬ್‌ಮಾರ್ಕೆಟಿಂಗ್‌ಯಾರ್ಡ್.

125 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಬೆಳವಡಿ ಗ್ರಾಮದಲ್ಲಿ ಸಬ್‌ಮಾರ್ಕೆಟಿಂಗ್‌ಯಾರ್ಡ್ ಪ್ರಾರಂಭಿಸಬೇಕೆಂದು ಮನವಿಗಳು ಸರ್ಕಾರಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಸರ್ಕಾರದವರು ಆ ಬಗ್ಗೆ ಯಾವ ಕ್ರಮ ಕೈಗೊಂಡಿರುವರು.

ಶ್ರೀ ಮದನಗೋಪಾಲ್ ನಾಯಕ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು);

ಅ) ಹೌದು.

ಆ) ಈ ಬಗ್ಗೆ ಕೃಷಿ ಮಾರಾಟ ನಿರ್ದೇಶಕರಿಂದ ಬಂದಿರುವ ಸಮೀಕ್ಷಾ ವರದಿಯು, ಸರ್ಕಾರದ ಪರಿಶೀಲನೆಯಲ್ಲಿದೆ.